# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಲ್ಲಿ ಆಯ್ಕೆಯಾಗಿರುವ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2018-19ನೇ ಸಾಲಿನ ಅನುದಾನವನ್ನು ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಿ ಹಂಚಿಕೆ ಮಾಡಿರುವ ಕುರಿತು.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:145:ಎಫ್‌ಎನ್:2016, ದಿ:01.04.2017.
2. ಆರ್ಥಿಕ ಇಲಾಖೆಯ ಅಟಿ ಸಂಖ್ಯೆ:ಆಇ:79:ವೆಚ್ಚ-6:2017, ದಿ:01.04.2017.
3. ಸರ್ಕಾರಿ ಆದೇಶ ಸಮಖ್ಯೆ:ಗ್ರಾಅಪ:09:ಗ್ರಾವಿಯೋ:2017, ದಿ:20.06.2017.
4. ಸರ್ಕಾರಿ ಆದೇಶ ಸಮಖ್ಯೆ:ಗ್ರಾಅಪ:21:ಗ್ರಾವಿಯೋ:2017, ದಿ:31.08.2017.
5. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ-1) ದಿ:31.08.2017.
6. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ-2) ದಿ:23.08.2017.
7. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ-3) ದಿ:20.09.2017.
8. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ-4 ದಿ:13.10.2017.
9. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:21:ಗ್ರಾವಿಯೋ:2017, (ಭಾ-5) ದಿ:28.11.2017.
10. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:30.10.2017.
11. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:16.12.2017.
12. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:39:ಗ್ರಾವಿಯೋ:2017, ದಿ:07.02.2018.

***

**ಪ್ರಸ್ತಾವನೆ:**

2018-19ನೇ ಸಾಲಿನ ಆಯವ್ಯಯದಲ್ಲಿ ಪ್ರಗತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2014-15ನೇ ಸಾಲಿನಿಂದ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಓದಲಾದ (1) ರಲ್ಲಿ ರೂ.398.04 ಕೋಟಿಗಳ ಅನುದಾನವನ್ನು ಒದಗಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು - ರೂ. 228.12 ಕೋಟಿಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ - ರೂ. 115.55 ಕೋಟಿಗಳು
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ - ರೂ. 54.37 ಕೋಟಿಗಳು

ಒಟ್ಟು - ರೂ. 398.04 ಕೋಟಿಗಳು

ಓದಲಾದ (3), (4), (5) (6), (7), (8), (9), (10), (11) ಮತ್ತು (12) ರಲ್ಲಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾದ ಗ್ರಾಮಗಳಿಗೆ 2017-18ನೇ ಸಾಲಿನಲ್ಲಿ ಈವರೆಗೆ ಒಟ್ಟು ರೂ. 300.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಪ್ರಗತಿ ಸಾಧಿಸಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾತ್ರ ಕಾಮಗಾರಿಗಳ ಅನುಷ್ಠಾನಕ್ಕಾಗಿ 2018-19ನೇ ಸಾಲಿನಲ್ಲಿ ರೂ.13286.75 ಲಕ್ಷಗಳ **(ರೂಪಾಯಿ ಹದಿಮೂರು ಸಾವಿವರದ ಇನ್ನೂರು ಎಂಭತ್ತಾರು ಲಕ್ಷಗಳು ಮತ್ತು ಎಪ್ಪತ್ತೈದು ಸಾವಿರಗಳು ಮಾತ್ರ)** ಅನುದಾನವನ್ನು ಹಂಚಿಕೆ ಮಾಡಿ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಿ ಗ್ರಾಮ ಪಂಚಾಯಿತಿಗಳಿಗೆ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲು ಕ್ರಮ ವಹಿಸಬೇಕಾಗಿರುತ್ತದೆ.

ಪ್ರಯುಕ್ತ ಈ ಆದೇಶ,

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಗ್ರಾವಿಯೋ:2018, ಬೆಂಗಳೂರು,**
**ದಿನಾಂಕ : 26.04.2018.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮ ವಿಕಾಸ ಯೋಜನೆ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.13286.75 ಲಕ್ಷಗಳ (ರೂಪಾಯಿ ಹದಿಮೂರು ಸಾವಿವರದ ಇನ್ನೂರು ಎಂಭತ್ತಾರು ಲಕ್ಷಗಳು ಮತ್ತು ಎಪ್ಪತ್ತೈದು ಸಾವಿರಗಳು ಮಾತ್ರ) ಅನುದಾನವನ್ನು ಅನುಬಂಧದಲ್ಲಿ ವಿವರಿಸಿದಂತೆ ಆಯ್ಕೆಯಾದ ಗ್ರಾಮಗಳಿಗೆ ಗ್ರಾಮವಾರು ಹಂಚಿಕೆ ಮಾಡಿ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಅನುಮತಿಸಿದೆ. ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು – ರೂ. 7614.64 ಲಕ್ಷಗಳು
2.4215-02-800-0-02-422(ಯೋಜನೆ) ವಿಶೇಷ ಘಟಕ ಯೋಜನೆ– ರೂ. 3857.14 ಲಕ್ಷಗಳು
3.4215-02-800-0-02-423(ಯೋಜನೆ) ಗಿರಿಜನ ಉಪಯೋಜನೆ – ರೂ. 1814.97 ಲಕ್ಷಗಳು

ಒಟ್ಟು –ರೂ. 13286.75 ಲಕ್ಷಗಳು

**ಈ ಆದೇಶದಲ್ಲಿ ಹಂಚಿಕೆ ಮಾಡಿ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಿರುವಂತೆ ಅನುದಾನವನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.**

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು.

ಈ ಅನುದಾನವನ್ನು ಓದಲಾದ (1) ರಲ್ಲಿ ನಿಗದಿಪಡಿಸಿದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಷರತ್ತುಗಳು :**

1. ಈ ಆದೇಶದಲ್ಲಿ ಹಂಚಿಕೆ ಮಾಡಿ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಅಳವಡಿಸಿರುವ ಅನುದಾನವನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾರ್ಗಸೂಚಿಯಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಅನುದಾನದಲ್ಲಿ ತೆಗೆದುಕೊಳ್ಳ ಬೇಕಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮಾತ್ರ ಅನುದಾನವನ್ನು ವಿನಿಯೋಗಿಸುವುದು.

2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ವಿಧಾನ ಸಭಾ ಕ್ಷೇತ್ರವಾರು ಪಡೆದು ಕ್ರೋಢೀಕರಿಸಿ ವರದಿಯನ್ನು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು.

3. ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ಇಲ್ಲದಂತಹ ಸಂದರ್ಭದಲ್ಲಿ ಒಂದು ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿರುವ ಅನುದಾನದಲ್ಲಿ ಎಸ್.ಸಿ.ಪಿ. & ಟಿ.ಎಸ್.ಪಿ ಗೆ ನಿಗದಿಪಡಿಸಿರುವ ಅನುದಾನವನ್ನು ಅದೇ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿರುವ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದ ವಾಸಿಸುವ ಗ್ರಾಮಗಳಲ್ಲಿ ಅನುದಾನವನ್ನು ಬಳಸಿಕೊಳ್ಳುವುದು.

4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿಲ್ಲವೆಂಬ ಕಾರಣಕ್ಕಾಗಿ ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಗೆ ನಿಗಧಿಪಡಿಸಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಸಾಮಾನ್ಯ ವರ್ಗಕ್ಕೆ ಮಾರ್ಗಪಲ್ಲಟ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ. ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

5. ಗ್ರಾಮ ಪಂಚಾಯತಿಗಳು ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವುದು.

6. ಗ್ರಾಮ ಪಂಚಾಯತಿಗಳು ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬ್ಯಾಂಕ್ ಚೆಕ್ ಮೂಲಕ ಮಾತ್ರವೇ ಕಡ್ಡಾಯವಾಗಿ ಕೂಡಲೇ ಪಾವತಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ನಗದುರೂಪದಲ್ಲಿ ಹಣ ಪಾವತಿಗೆ ಅವಕಾಶವಿರುವುದಿಲ್ಲ.

7. ಕಾಮಗಾರಿ ಪೂರ್ಣಗೊಂಡ ನಂತರ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಅನುದಾನ ಲಭ್ಯವಿದ್ದರೂ ಸಹ ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿಮಾಡಲು ಗ್ರಾಮ ಪಂಚಾಯತಿಗಳು ವಿಳಂಬ ನೀತಿ ಅನುಸರಿಸಿದಲ್ಲಿ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

8. ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.

9. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

10. ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್‌ಇಡಿ / ಉಪ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

11. ಅನುಷ್ಠಾನಾಧಿಕಾರಿಗಳು ಹಣ ಬಳಕೆಯ ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ವಿಳಂಬಕ್ಕೆ ಅವಕಾಶವಿಲ್ಲದಂತೆ ಸಲ್ಲಿಸುವುದು.

12. ಈ ಆದೇಶವನ್ನು ಇಲಾಖಾ ವೆಬ್‌ಸೈಟ್ http://rdpr.kar.nic.in/ ನಲ್ಲಿ ಮಾಹಿತಿಗಾಗಿ ಅಪ್‌ಲೋಡ್ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ.ಬೂವನಹಳ್ಳಿನಾಗರಾಜ್)
ನಿರ್ದೇಶಕರು ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮಾನ್ಯ ಮುಖ್ಯ ಮಂತ್ರಿಗಳ ಅಪರ ಕಾರ್ಯದರ್ಶಿಗಳು [illegible]

2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌದ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
8. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು.
10. ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
11. ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
16. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
18. ಮುಖ್ಯಸ್ಥರು, ಗಣಕಕೋಶ / ವೆಬ್‌ಸೈಟ್ ನಲ್ಲಿ ಅಳವಡಿಸಲು.
19. ಸಂಪಾದಕರು, ಕರ್ನಾಟಕ ವಿಕಾಸ.
20. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.